ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೨೨ನೇ ಮಾರ್ಚ್ ೧೯೮೮ ಚೈತ್ರ ೮, ೧೯೦೯ ಶ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ ೩-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು:

ನಂದೀಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಹಣ ದುರುಪಯೋಗವಾಗಿರುವುದು

೧೨೪೪. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಹಣ ದುರುಪಯೋಗವಾಗಿರುವುದು ನಿಜವೇ, ಹಾಗಿದ್ದಲ್ಲಿ ಹಣ ದುರುಪಯೋಗಕ್ಕೆ ಕಾರಣರಾದವರಾರು, ಒಟ್ಟು ದುರುಪಯೋಗವಾದ ಹಣ ವೆಷ್ಟು ?

ಆ) ತಪ್ಪಿತಸ್ಥರ ವಿರುದ್ಧ ವಿಶ್ವವಿದ್ಯಾಲಯವಾಗಲಿ ಅಥವಾ ಸರ್ಕಾರದವರಾಗಲಿ ಕೈಗೊಂಡಿರುವ ಹಾಗೂ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು). —ಮಾನ್ಯ ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ತಮ್ಮ ಅನುಮತಿಯನ್ನು ಪಡೆದು ಈ ಉತ್ತರವನ್ನು ಓದುತ್ತೇನೆ.

ಅ) ಹೌದು. ಡಾ॥ ಬಿ. ಸೋಮಶೇಖರ್ ನಂದಿ ಹಳ್ಳಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು. ಅಂದಾಜು ರೂ. ೧೬,೭೪,೯೨೫-೦೦

ಆ) ಡಾ॥ ಬಿ. ಸೋಮಶೇಖರ್ ಅವರನ್ನು ಅಮಾನತ್ತಿನಲ್ಲಿಡಲಾಗಿದೆ. ಸಂಡೂರು ಪೋಲೀಸ್ ಠಾಣೆಯಲ್ಲಿ ದಿನಾಂಕ ೨೩-೧೧-೮೭ ರಲ್ಲಿ ಪ್ರಕರಣವನ್ನು ನೋಂದಾಯಿಸಲಾಗಿದೆ ಈ ಪ್ರಕರಣವನ್ನು ತನಿಖೆ ನಡೆಸಲು ಗುಪ್ತಚಾರದಳ (ಸಿಐಡಿ)ಕ್ಕೆ ವಹಿಸಲಾಗಿದೆ. ಸಿಐಡಿ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

ಶ್ರೀ ಯು. ಭೂಪತಿ —ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಹಣ ದುರುಪಯೋಗವಾದಂಥ ಪ್ರಕರಣ ಯಾವಾಗ ಬೆಳಕಿಗೆ ಬಂತು ? ವಿಶ್ವವಿದ್ಯಾನಿಲಯದ ಗಮನಕ್ಕೆ ಯಾವಾಗ ಬಂತು ? ವಿಶ್ವವಿದ್ಯಾನಿಲಯದವರು ತಕ್ಷಣ ಯಾವ ಕ್ರಮ ಕೈಗೊಂಡರು ಎಂದು ಹೇಳುತ್ತೀರಾ ?

ಶ್ರೀ ಬಿ. ಸೋಮಶೇಖರ್.—ದಯವಿಟ್ಟು ಪುತ್ತೊಪ್ಪೆಯ ಕೇಳಿ ?

ಶ್ರೀ ಯು. ಭೂಪತಿ.—ಇದು ಸ್ನಾತಕೋತ್ತರ ಕೇಂದ್ರಕ್ಕೆ ಸಂಬಂಧಪಟ್ಟ ಪ್ರಶ್ನೆ. ಈ ಹಣ ದುರುಪಯೋಗದ ವಿಚಾರ ವಿಶ್ವವಿದ್ಯಾನಿಲಯದ ಗಮನಕ್ಕೆ ಯಾವಾಗ ಬಂತು ? ವಿಶ್ವವಿದ್ಯಾನಿಲಯದವರು ತಕ್ಷಣ ಯಾವ ಕ್ರಮವನ್ನು ಕೈಗೊಂಡರು ? ಸೆನೆಟ್, ಸಿಂಡಿಕೇಟ್ ಮಧ್ಯ ಇದು ಚರ್ಚೆ

ಯಾಗಿದೆಯೆ ? ಚರ್ಚೆಯಾಗಿ ಏನು ಕ್ರಮವನ್ನು ಅವರು ತೆಗೆದುಕೊಂಡಿದ್ದಾರೆ ? ಇದರಲ್ಲಿ ೧೬ ಲಕ್ಷ ರೂಪಾಯಿ ಮಾಲ್ ಅಡ್ಜಸ್ಟ್‌ಮೆಂಟ್ ಆಗಿದೆಯೆಂದು ಸಚಿವರೇ ಒಪ್ಪಿಕೊಂಡಿದ್ದಾರೆ. ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಜಾಗ ಖಾಲಿ ಇದಯೇ ಇಲ್ಲವೇ ? ಯಾರನ್ನು ಅಲ್ಲಿ ಹಾಕಿದ್ದಾರೆ ? ೧೯೮೭ ರಲ್ಲಿ ಈ ಪ್ರಕರಣ ಆಗಿರುವುದೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳುತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್.—ಸಿಂಡಿಕೇಟ್ ಸಮಿತಿಯವರು ಪರಿಶೀಲಿಸಬೇಕೆಂದು ಹೇಳಿದ್ದರಿಂದ ಅವರಪರದಿಯನ್ನು ಕಾಯಂತ್ತಿದ್ದೇವೆ. ಈ ವರದಿ ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಖಾಲಿ ಇರುವ ಜಾಗದಲ್ಲಿ ಯಾರನ್ನಾದರೂ ಹಾಕಿದ್ದಾರೆಯೇ ಎಂದು ಕೇಳಿದ್ದಾರೆ. ಇದರ ಬಗ್ಗೆ ವರದಿಯನ್ನು ತರಿಸಿ ಹೇಳುತ್ತೇನೆ.

ಶ್ರೀ ಯು. ಭೂಪತಿ,—ಇದು ಪಿ. ಜಿ. ಸೆಂಟರ್ ವಿಷಯವಾಗಿರುವುದರಿಂದ ಸರ್ಕಾರಕ್ಕೆ ಇದಂ ಸಂಬಂಧಪಟ್ಟಿರುವುದಿಲ್ಲ. ಮೊದಲು ವಿಶ್ವವಿದ್ಯಾನಿಲಯದವರು ಕ್ರಮ ಜರುಗಿಸಿದಮೇಲೆ ನಂತರ ಸರ್ಕಾರ ಕ್ರಮ ಜರುಗಿಸುತ್ತದೆ. ಅವರನ್ನು ಸಸ್ಪೆಂಡ್ ಮಾಡಿರುವುದು ವಿಶ್ವವಿದ್ಯಾನಿಲಯದವರು, ಸರ್ಕಾರವಲ್ಲ. ವಿಶ್ವವಿದ್ಯಾನಿಲಯದಲ್ಲಿ ಈ ವಿಷಯ ಪ್ರಸ್ತಾಪ ಆಗಿಲ್ಲವೆ ? ಯಾವ ಸಂದರ್ಭದಲ್ಲಿ ಅವರು ಕ್ರಮವನ್ನು ತೆಗೆದುಕೊಂಡಿದ್ದಾರೆ ? ಪ್ರಾಪರ್ಟಿಯನ್ನು ಅಟ್ಯಾಚ್ ಮಾಡಿದ್ದಾರೆಯೆ ? ರಿಕವರಿ ಮಾಡುತ್ತಿದ್ದಾರೆಯೆ ? ಇಲ್ಲಿಯವರೆಗೆ ಎಷ್ಟು ರಿಕವರಿ ಆಗಿದೆ ? ಏನು ಫಾಲೋ ಅಪ್ ಆಕ್ಷನ್ ಮಾಡುತ್ತಿದ್ದೀರಿ ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಸದಸ್ಯರು ಏನು ವಿವರಗಳನ್ನು ಕೇಳಿದ್ದಾರೆ, ಅದರ ಬಗ್ಗೆ ವರದಿಯನ್ನು ತರಿಸಿಕೊಡುತ್ತೇನೆ.

ಖಾಸಗೀ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಉಪಾಧ್ಯಾಯರ ಸಂಬಳವನ್ನು ಕೊಡುವುದರಲ್ಲಿ ವಿಳಂಬವಾಗಿರುವುದು

೧೧೩೨. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಆನುದಾನ ಪಡೆಯುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಉಪಾಧ್ಯಾಯರಿಗೆ ಡಿಸೆಂಬರ್ ೮೭ ರಿಂದ ಸಂಬಳ ಕೊಡುವುದರಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?

ಇ) ಸರ್ಕಾರವು ಈ ಬಗ್ಗೆ ಯಾವ ಕಾರ್ಯ ವಿಧಾನವನ್ನು ಸೂಚಿಸಿದೆ ?

ಈ) ಆನುದಾನ ಪಡೆಯುತ್ತಿರುವ ಖಾಸಗಿ ಶಾಲಾ ಶಿಕ್ಷಕರಿಗೆ ಹೈದ್ರಾಬಾದ್ ವೇತನ ಶ್ರೇಣಿಯನ್ನು ಮಂಜೂರು ಮಾಡುವುದು ಯಾವ ಹಂತದಲ್ಲಿದೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು),—

ಅ) ಹೌದು, ಕೆಲವು ಪ್ರಕರಣಗಳಲ್ಲಿ.

ಆ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ಗೆ ಒದಗಿಸಲಾದ ಹಣದಲ್ಲಿ ಕೊರತೆಯಾಗಿದ್ದುದರಿಂದ.

ಇ) ಈಗ ಫೆಬ್ರುವರಿ ೮೮ ರ ವರೆಗಿನ ವೇತನ ಬಿಡುಗಡೆಯಾಗಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಕೆಲವು ಪ್ರಕರಣಗಳಲ್ಲಿ 'ಹೌದು' ಎಂದು ಹೇಳಿದ್ದಾರೆ. ಈ ಸಂಖ್ಯೆ ಎಷ್ಟು ಎಂದು ಹೇಳುತ್ತೀರಾ ?

ಶ್ರೀ ಬಿ ಸೋಮಶೇಖರ್.—ತರಿಸಿಕೊಡುತ್ತೇನೆ. ಕೆಲವು ಪ್ರಕರಣಗಳಲ್ಲಿ ಎಂದು ಹೇಳಿದ್ದೇನೆ.